# ವಾಣಿಜ್ಯ ನಗರಿ ರಾಣೇಬೆನ್ನೂರಲ್ಲಿ ಸಂಭ್ರಮದ ಈದ್ ಮಿಲಾದ್



**ಲೋಕದರ್ಶನ ವರದಿ**

ರಾಣೇಬೆನ್ನೂರು 21: ವಾಣಿಜ್ಯ ನಗರದಲ್ಲಿ ಮುಸ್ಲಿಂ ಭಾಂದವರ ಭಾವೈಕ್ಯತೆ ಸಾರುವ ಪ್ರವಾದಿ ಹಜರತ್ ಮಹಮ್ಮದ್ ಪೈಗಂಬರ್‌ರವರ ಈದ್ ಮಿಲಾದ್ ಕಾರ್ಯಕ್ರಮವು ಅತ್ಯಂತ ಸಡಗರ ಸಂಭ್ರಮಗಳೊಂದಿಗೆ ಸರ್ಕಾರದ ನಿಯಮಾವಳಿಗಳನ್ನು ಅನುಸರಿಸಿ ಸಮುದಾಯದ ಬಾಂದವರು ಆಚರಿಸಿದರು.

ಮಂಗಳವಾರ ಮುಂಜಾನೆಯಿಂದಲೇ ಯುವ ಸಮುದಾಯ ಅತ್ಯಂತ ಪ್ರೀತಿ ವಿಶ್ವಾಸ ಭಾವೈಕ್ಯತೆಯೊಂದಿಗೆ ಆಚರಣೆಗೆ ಮುಂದಾದ ಬಾಂದವರು ಇಲ್ಲಿನ ಇಸ್ಲಾಂಪುರ್ ಗಲ್ಲಿಯಿಂದ ಹಜರತ್ ಜಮಾಲ್‌ಶಾವಲಿ ದರ್ಗಾದವರೆಗೆ ಮಕ್ಕಾ-ಮದಿನಾ ಸ್ತಬ್ದ ಚಿತ್ರದ ಮೂಲಕ ಮೇರವಣಿಗೆ ಸಾಗಿ ಖಬರಸ್ಥಾನ, ಎಡಿಬಿ ರಸ್ತೆ, ಬಸ್ ನಿಲ್ದಾಣ ಇಸ್ಲಾಂಪೂರ್ ಓಣಿ ಎಂಜಿ ರಸ್ತೆ ಮೂಲಕ ಸಾಗಿ ಜನತಾ ಬಜಾರ್ ಬಳಿಯ ಇತಿಹಾಸ ಪ್ರಸಿದ್ದ ದರ್ಗಾ ತಲುಪಿ ಅಲ್ಲಿ ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವುದರ ಮೂಲಕ ಸಂಭ್ರಮದ ಆಚರಣೆ ಮಾಡಿದರು. ಮೇರವಣಿಗೆಯಲ್ಲಿ ವಿವಿಧ ದರ್ಗಾಗಳ ಧಾರ್ಮಿಕ ಮುಖಂಡರು, ಸಮಾಜದ ಗಣ್ಯರು, ಯುವ ಮುಖಂಡರು ಪಾಲ್ಗೊಂಡಿದ್ದರು. ಈದ್ ಮಿಲಾದ್ ನಿಮಿತ್ತ ಸಮಾಜದ ಮುಖಂಡರು ಸರ್ಕಾರಿ ಆಸ್ಪತ್ರೆಗೆ ತೆರಳಿ ಅಲ್ಲಿನ ನೂರಾರು ರೋಗಿಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಿ ತಮ್ಮ ಮಾನವೀಯ ಸೇವಾ ಕಾರ್ಯವನ್ನು ಮೆರೆದರು. ಮುಖಂಡರಾದ ಶೇರುಖಾನ್ ಕಾಬೂಲಿ, ನೂರುಲ್ಲಾ ಖಾಜಿ, ಇರ್ಫಾನ್ ದಿಡಗೂರ, ಇರ್ಶಾದ್ ಬಳ್ಳಾರಿ, ನೂರುಲ್ಲಾ ರಾಣೆಬೆನ್ನೂರ, ಅಮಾನುಲ್ಲಾ ಹಾವೇರಿ, ಬಾಷಾಸಾಬ್ ನೀಲಗಾರ, ಅಹ್ಮದ್ ಕಿಲ್ಲೇದಾರ, ಬಶೀರ್ ಅಹ್ಮದ್, ಮಹಬೂಬಸಾಬ ಪಾಟೀಲ, ಇಮ್ರಾನ್ ಹಕೀಂ, ಮಾಬೂಸಾಬ ಕಿಲ್ಲೇದಾರ, ತನವೀರ್ ಕಠಾರಿ, ಅಜರುದ್ದೀನ್ ಭಾವಿಕಟ್ಟಿ ಸೇರಿದಂತೆ ಸಮಾಜದ ಅನೇಕ ಗಣ್ಯರು ಯುವ ಮುಖಂಡರು ಮುಂಚೂಣಿಯಲ್ಲಿ ಪಾಲ್ಗೊಂಡಿದ್ದರು.

# 'ಮಹರ್ಷಿ ವಾಲ್ಮೀಕಿ ಆದರ್ಶ ಪಾಲನೆ ಮಾಡೋಣ'



ಹಾವೇರಿ 21: ಮಹರ್ಷಿ ವಾಲ್ಮೀಕಿ ಅವರ ಜೀವನ ತತ್ವ ಸಿದ್ಧಾಂತಗಳು ಸರ್ವ ಕಾಲಿಕವಾಗಿವೆ. ಅವರ ಆದರ್ಶ ಪಾಲನೆ ಮಾಡೋಣ ಎಂದು ವಾಲ್ಮೀಕಿ ಯುವಕ ಸಂಘದ ಅಧ್ಯಕ್ಷ ಜಯಪ್ಪ ತಳವಾರ ಹೇಳಿದರು.

ಜಿಲ್ಲೆಯ ಸವಣೂರ ತಾಲೂಕಿನ ಹಿರೇಮುಗದೂರ ಗ್ರಾಮದ ವಾಲ್ಮೀಕಿ ಯುವಕ ಸಂಘದ ವತಿಯಿಂದ ವಾಲ್ಮೀಕಿ ಜಯಂತಿ ಆಚರಿಸಿ ಅವರು ಮಾತನಾಡಿದರು. ಮಹಾನ್ ತಪಸ್ವಿಯಾಗಿ ಜ್ಞಾನ ಭಂಡಾರ ಹೊಂದಿ, ರಾಮಾಯಣ ಮಹಾ ಕಾವ್ಯ ರಚನೆ ಮಾಡಿ ಜೀವನ ಸಂದೇಶವನ್ನು ಪ್ರಪಂಚಕ್ಕೆ ಸಾರಿದ್ದಾರೆ. ಅವರು ನಮಗೆ ಪ್ರೇರಣಾ ಶಕ್ತಿಯಾಗಿದ್ದಾರೆ ಎಂದರು. ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಮಂಜನಗೌಡ ಕಲ್ಲನಗೌಡ್ರ. ಉಪಾಧ್ಯಕ್ಷ ಮರಿಯಪ್ಪ ನಡುವಿನಮನಿ.ಗ್ರಾಪಂ ಸದಸ್ಯರಾದ ನಿಂಗಪ್ಪ ಎಂ ಆರೇರ ಮುಖಂಡರಾದ ಪರಮಯ್ಯಸ್ವಾಮಿ ಹಿರೇಮಠ.ಬಸವರಾಜ ಸೋಮಸಾಗರ. ಮಲ್ಲಪ್ಪ ತಳವಾರ.ಕೊಟೆಪ್ಪ ತಳವಾರ.ಪರಶುರಾಮ ಹರ್ಲಾಪುರ. ಮಾಲತೇಶ ತಳವಾರ.ಅಡಿವೆಪ್ಪ ಕೊರಡೂರ. ಹನುಮಂತಪ್ಪ ಟಿ. ಸುರೇಶ ತಳವಾರ.ನಿಂಗಪ್ಪ ತಳವಾರ.ಹನುಮಂತಪ್ಪ ಕಲಕೋಟಿ. ಸಣ್ಣಪ್ಪ ಹೊಸಮನಿ. ಮಲ್ಲಾರೆಪ್ಪ ಟಿ.ಚಂದ್ರು ಟಿ.ನಿಂಗಪ್ಪ ಟಿ.ರವಿ ಟಿ.ನಿಂಗಪ್ಪ ಮೇಲ್ಮರಿ.ವೀರೇಶ ಸಿ.ಕೊಟೆಪ್ಪ ತಳವಾರ.ಶಿವಪ್ಪ ಮೂಲಿಮನಿ. ಸೇರಿದಂತೆ ವಾಲ್ಮೀಕಿ ಸಮುದಾಯದವರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

## ಸಂಕ್ಷಿಪ್ತ ಸುದ್ದಿಗಳು

### ಹೆರೂರು ಗ್ರಾಮಸ್ಥರೊಂದಿಗೆ ಪೊಲೀಸ್ ವೀಕ್ಷಕರ ಚರ್ಚೆ

ಹಾವೇರಿ 21: ಹಾನಗಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಹೆರೂರು ಗ್ರಾಮದಕ್ಕೆ ಕೇಂದ್ರ ಚುನಾವಣಾ ವೀಕ್ಷಕರಾದ ಎಂ .ಆರ್ .ಘುರೆ ಅವರು ಭೇಟಿ ನೀಡಿ, ಗ್ರಾಮಸ್ಥರೊಂದಿಗೆ ಚರ್ಚಿಸಿದರು

ಬುಧವಾರ ಹೊರೂರು ಗ್ರಾಮದ ದುರ್ಬಲ ಸಮೂಹದ ಮತದಾರರು ವಾಸಿಸುವ ಸಂಖ್ಯೆ 175 ಹಾಗೂ 176 ಮತಗಟ್ಟೆಗಳ ವ್ಯಾಪ್ತಿಯ ಜನರೊಂದಿಗೆ ಚರ್ಚಿಸಿ ಮಾಹಿತಿ ಪಡೆದು ಕೊಂಡರು. ಹಿಂದಿನ ಚುನಾವಣೆಯ ಮತದಾನದ ಕುರಿತಂತೆ ವಿವರ ಪಡೆದರು ನಿರ್ಭಯವಾಗಿ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿ ಎಂದು ತಿಳಿಸಿದರು

ಈ ಸಂದರ್ಭದಲ್ಲಿ ಮತಗಟ್ಟೆ ಅಧಿಕಾರಿಗಳು, ಪೋಲೀಸ್ ಅಧಿಕಾರಿಗಳು, ಕಂದಾಯ ಅಧಿಕಾರಿಗಳು ಸ್ಥಳೀಯರು ಭಾಗವಹಿಸಿದ್ದರು.

### ಇಂದು ಅಕ್ಕಿಆಲೂರಿಗೆ ಪೊಲೀಸ್ ವೀಕ್ಷಕ ಮಹೇಶ ಘುರೆ ಭೇಟಿ

ಹಾವೇರಿ 21: ಹಾನಗಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಅಕ್ಕಿಆಲೂರಿಗೆ ಕೇಂದ್ರ ಚುನಾವಣಾ ಪೋಲೀಸ್ ವೀಕ್ಷಕರಾದ ಐ ಪಿ ಎಸ್ ಅಧಿಕಾರಿ ಎಂ ಆರ್ ಘುರೆ ಅವರು ಅಕ್ಟೋಬರ್ 22 ರಂದು ಬೆಳಿಗ್ಗೆ 11-30 ಗಂಟೆಗೆ ಭೇಟಿ ನೀಡಲಿದ್ದಾರೆ. ಪೋಲೀಸ್ ವೀಕ್ಷಕರ ದೂರವಾಣಿ ಸಂಖ್ಯೆ 08379- 262240 ಹಾಗೂ ಮೊಬೈಲ್ 8217298478 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.




ಶಿಗ್ಗಾವಿ : ಹಾನಗಲ್ಲ ಉಪ ಚುನಾವಣೆಯಲ್ಲಿ ಕಾಂಗ್ರೆಸ ಅಭ್ಯರ್ಥಿ ಶ್ರೀನಿವಾಸ ಮಾನೆ ಪರ ಬೊಮ್ಮನಹಳ್ಳಿ ಜಿಲ್ಲಾ ಪಂಚಾಯತ ವ್ಯಾಪ್ತಿಯ ಕರಗುದರಿ, ನಿಟಗಿನಕೊಪ್ಪ, ಬಾದಾಮಗಟ್ಟಿ, ಗ್ರಾಮಸ್ಥರೊಂದಿಗೆ ಕೆ.ಪಿ.ಸಿ.ಸಿ ಎಸ್.ಟಿ.ಮೋರ್ಚಾ ಪ್ರಧಾನ ಕಾರ್ಯದರ್ಶಿ ಪ್ರಕಾಶ ಹಾದಿಮನಿ ಮತಯಾಚಿಸಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.



ಶಿಗ್ಗಾವಿ: ಹಾನಗಲ್ಲ ಉಪ ಚುನಾವಣೆಯಲ್ಲಿ ಕಾಂಗ್ರೆಸ ಅಭ್ಯರ್ಥಿ ಶ್ರೀನಿವಾಸ ಮಾನೆ ಪರ ಗ್ರಾಮಸ್ಥರೊಂದಿಗೆ ಬೆಳಗಾವಿ ಗ್ರಾಮೀಣ ವಿಭಾಗದ ಶಾಸಕಿ ಲಕ್ಷ್ಮೀ ಹೆಬ್ಬಾಳಕರ ಮತಯಾಚಿಸಿದರು. ಈ ಸಂದರ್ಭದಲ್ಲಿ ತಾಲೂಕಿನ ಯುವ ಮುಖಂಡ ಶ್ರೀಕಾಂತ ದುಂಡಿಗೌಡ್ರ, ಶಿವಾನಂದ ಬಾಗೂರ, ಸಿದ್ದಣ್ಣಾ ಮೊರಬದ, ಸಾಮಾಜಿಕ ಜಾಲತಾಣ ಜಿಲ್ಲಾಧ್ಯಕ್ಷ ಮಹಾಂತೇಶ ಸಾಲಿ ಸೇರಿದಂತೆ ಗ್ರಾಮಸ್ಥರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

# ಆಧುನಿಕತೆಗೆ ತಕ್ಕಂತೆ ಬದಲಾಗಬೇಕು: ಶಶಿಧರ ಯಲಿಗಾರ

**ಲೋಕದರ್ಶನ ವರದಿ**

ಶಿಗ್ಗಾವಿ 21: ಪರಿಸರ ಮಾಲಿನ್ಯ ತಪ್ಪಿಸಲು, ಹಾಗೂ ಪರಿಸರ ಸಂರಕ್ಷಣೆಗಾಗಿ ಆಟೋಚಾಲಕರು ಅಧುನಿಕತೆಗೆ ತಕ್ಕಂತೆ ಬದಲಾಗುವ ನಿಟ್ಟಿನಲ್ಲಿ ಶಿಗ್ಗಾವಿ ಆಟೋ ಚಾಲಕರು ಹಳೆ ಆಟೋಗಳ ಬದಲಾಗಿ ಹೊಸ ವಿದ್ಯುತ್ ಚಾಲಿತ ಅಟೋ ಖರೀದಿಸಲು ಮುಂದಾದರೇ ಅಂಥವರಿಗೆ ನಮ್ಮ ಸಿ ಬಿ ಯಲಿಗಾರ ಸೇವಾ ಸಂಸ್ಥೆಯಿಂದ 10 ಸಾವಿರ ರೂ. ಸಹಾಯಧನ ನೀಡಲಾಗುವುದು ಎಂದು ಸಿ. ಬಿ. ಯಲಿಗಾರ ಸೇವಾ ಸಂಸ್ಥೆಯ ಅಧ್ಯಕ್ಷ ಶಶಿಧರ ಯಲಿಗಾರ ಹೇಳಿದರು.

ಈದ್ ಮಿಲಾದ್ ಹಬ್ಬದ ಪ್ರಯುಕ್ತ ಪಟ್ಟಣದ ಬಸ್ ನಿಲ್ದಾಣದ ಹತ್ತಿರ ಶಂಕರನಾಗ ಅಟೋ ಚಾಲಕರ ಸಂಘ ಆಯೋಜಿಸಿದ್ದ ಶರಬತ್ ವಿತರಣಾ ಕಾರ್ಯಕ್ರಮದಲ್ಲಿ ಮುಸ್ಲಿಂ ಬಾಂಧವರಿಗೆ ಸಿಹಿ ತಿನ್ನಿಸಿ ಮಾತನಾಡಿದ ಅವರು ಅಟೋಚಾಲಕರು ಅಧುನಿಕತೆಗೆ ತಕ್ಕಂತೆ ಬದಲಾಗಬೇಕು. ಇಂದಿನ ದುಬಾರಿ ಕಾಲದಲ್ಲಿ ಹಳೆ ಆಟೋಗಳನ್ನು ಓಡಿಸುವದರ ಬದಲಾಗಿ ವಿದ್ಯುತ್ ಚಾಲಿಕ ಅಟೋಗಳನ್ನು ಬಳಸುವುದರಿಂದ ನಿಮ್ಮ ವೆಚ್ಚವನ್ನು ಕಡಿಮೆ ಮಾಡುವುದರ ಜೊತೆಗೆ ಪರಿಸರ ರಕ್ಷಣೆಯನ್ನು ಮಾಡಲು ಸಾಧ್ಯವಿದೆ, ಸಹಾಯ ಧನದ ಸೇವೆ ಸಂಘದಲ್ಲಿ ನೊಂದಣಿಯಾದವರಿಗೆ ಮಾತ್ರ ಅನ್ವಯಿಸುತ್ತದೆ ಎಂದರು.



ಈಗಾಗಲೇ ಕಳೆದೆರಡು ವರ್ಷಗಳಿಂದ ಕೋವೀಡ್ ಲಾಕಡೌನ್‌ನಿಂದಾಗಿ ಕೆಲಸವಿಲ್ಲದೆ ಸಾಕಷ್ಟು ನಷ್ಟ ಅನುಭವಿಸಿರುವ ಅಟೋಚಾಲಕರು ವಾಹನಗಳ ತೆರಿಗೆ, ವಾಹನ ನವೀಕರಣಕಷ್ಟವಾಗಿದೆ. ಅಲ್ಲದೆ ಸರ್ಕಾರ ಹಳೆ ವಾಹನಗಳ ನವೀಕರಣವನ್ನು ಹೊಸ ವಾಹನಗಳಿಗಿಂತ ದುಪ್ಪಟ್ಟು ಮಾಡಿದೆ ಮತ್ತು ಪೆಟ್ರೋಲ್ ಬೆಲೆ ಕೂಡಗಗನಕ್ಕೇರಿದೆ. ಆದ್ದರಿಂದ ಚಾಲಕರು ವಿದ್ಯುತ್‌ಚಾಲಿತ ಅಟೋಗಳನ್ನು ಖರೀದಿಸಿರಿ. ಇದರಿಂದ ನಿಮ್ಮ ನಿತ್ಯದ ಪೆಟ್ರೋಲ್ ವೆಚ್ಚ ಉಳಿಯುವುದರ ಜತೆಗೆ ಸಾಲದ ಕಂತುಗಳನ್ನು ಸುಲಭವಾಗಿ ತುಂಬಬಹುದಾಗಿದೆ ಎಂದರು.

ಅಂಜುಮನ್ ಅಧ್ಯಕ್ಷ ಸುಲೇಮಾನ ಖಾಜಾಖಾನನವರ, ಉಪಾಧ್ಯಕ್ಷ ಮಜೀದ ಮಾಳಗಿಮನಿ, ಮುಖಂಡ ಕರೀಸಾಬ್ ಮೊಗಲಲ್ಲಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪುರಸಭೆ ಉಪಾಧ್ಯಕ್ಷ ಮಂಜು ಬ್ಯಾಹಟ್ಟಿ, ಸ್ಥಾಯಿ ಸಮಿತಿ ಅಧ್ಯಕ್ಷ ಜಾಪರ್‌ಖಾನ್ ಪಠಾಣ್, ರೈತ ಧ್ವನಿ ಸಂಪಾದಕ ಬಸವರಾಜ ಕುರಗೋಡಿ, ಹೊಸೂರ ಗ್ರಾಪಂ ಸದಸ್ಯ ನಾಗರಾಜ ಸೂರಗೊಂಡ, ಮಹ್ಮದ್‌ಹನೀಫ ಅಂಬೂರ, ಗೌಸಮೊದೀನ್ ದುಂಡಸಿ, ಅತ್ತಾವುಲ್ಲಾಖನ್ ಖಾಜೇಖಾನವರ, ನಿಸಾರ ಪೆಂಡಾರ, ಗುರುನಗೌಡ ದುಂಡಿಗೌಡ್ರ, ಅಹ್ಮದ್ ಬಾಷಾ ಗುಲಾಮೋದ್ದೀನ, ಮಹ್ಮದ್ಗೌಸ್ ಸವಣೂರ, ಸರತಾಜ್ ಹಾನಗಲ್, ನಜೀರ ನೀರಮನಿ ಹಾಗೂ ಅಟೋ ಚಾಲಕರು ಉಪಸ್ಥಿತರಿದ್ದರು.

# 'ಕೆಲಸಗಾರರನ್ನು ಮನೆಯವರಂತೆ ಕಾಣುವ ವ್ಯಕಿತ್ವ ಹಂಚಿನಮನೆಯವರದ್ದಾಗಿದೆ'




**ಲೋಕದರ್ಶನ ವರದಿ**

ಶಿಗ್ಗಾವಿ 21: ನಾ ಎನ್ನುವದನ್ನು ಬಿಟ್ಟು ಅರಿಷ್ಟವರ್ಗಗಳನ್ನು ಗೆದ್ದು ಎಲ್ಲರನ್ನು ಗೌರವದಿಂದ ಕಾಣುವ ಗುಣ ಹೊಂದಿದವನು ಜೀವನದಲ್ಲಿ ಯಶಸ್ವಿಯಾಗುತ್ತಾರೆ ಎನ್ನುವುದಕ್ಕೆ ಹಂಚಿನಮನಿ ಕುಟುಂಬ ಸಾಕ್ಷಿಯಾಗಿದೆ ಎಂದು ಶಿಗ್ಗಾವಿ ವಿರಕ್ತಮಠದ ಸಂಗನಬಸವ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ವನಹಳ್ಳಿ ಪ್ಲಾಟ್‌ನಲ್ಲಿ ಹಂಚಿನಮನಿ ಕುಟುಂಬದಿಂದ ದಸರಾ ಹಬ್ಬದ ಪ್ರಯುಕ್ತ ವಾಹನ ಪೂಜಾ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದ ಅವರು ಕೆಲಸಗಾರರನ್ನು ಮನೆಯವರಂತೆ ಕಾಣುವ ವ್ಯಕ್ತಿತ್ವ ಅರ್ಜುನ ಹಂಚಿನಮನಿಯಾವರಾದಾಗಿದೆ ಅವರಿಂದ ಸಹಾಯ ಸಹಕಾರ ಪಡೆದ ಹಲವಾರು ಜನರು ಮುಂದೆ ಬಂದಿದ್ದಾರೆ ಎಂದರು. ಭಾಜಪ ತಾಲೂಕಾದ್ಯಕ್ಷ ಶಿವಾನಂದ ಮ್ಯಾಗೇರಿ ಮಾತನಾಡಿ ಹೆಸರು ತಂದವರಿಗೆ ಉಣಿಸುವ ಕಾರ್ಯ ಮಾಡಿದವರು ಹಂಚಿನಮನಿಯವರು, ತಾಯಿ ಗುಣವನ್ನು ಹೊಂದಿದವರು, ಕಾಯಕವೇ ಕೈಲಾಸವೆಂದು ದುಡಿಯುವರು ಪ್ರಾಮಾಣಿಕ ಸೇವೆ ನೀಡಿದವರು ಅರ್ಜುನ ಹಂಚಿಮನಿಯವರಾಗಿದ್ದಾರೆ ಎಂದರು. ಡಾ ಬಸವರಾಜ ಸಜ್ಜನ ಮಾತನಾಡಿ ಸಂಜೀವಿನಿ ಮಲ್ಟಿಸ್ಪೇಷಲ್ ಆಸ್ಪತ್ರೆ ಮಾಡಲು ಅನುಕೂಲ ಮಾಡಿಕೊಟ್ಟಿದ್ದಾರೆ, ಮುಖ್ಯಮಂತ್ರಿಗಳ ಆಪ್ತರು, ಕೆಲಸಗಾರರನ್ನು ಗೌರವಿಸುವ ಗುಣ ಹೊಂದಿರುವವರಾಗಿದ್ದು ಹಲವರಿಗೆ ಉದ್ಯೋಗ ನೀಡಿದ್ದಾರೆ, ಆರೋಗ್ಯ ದೃಷ್ಟಿಯಿಂದ ಒಳ್ಳೆಯ ವಿಚಾರವನ್ನು ಹೊಂದಿದವರು ಎಂದರು.

ಪಂಚಮಸಾಲಿ ಸಮಾಜದ ಅಧ್ಯಕ್ಷ ಶಿವಾನಂದ ಬಾಗೂರ ಮಾತನಾಡಿ, ಅರ್ಜುನ ಹಂಚಿನಮನಿ ಪ್ರಾಮಾಣಿಕವಾಗಿ ದುಡಿಮಯೇ ದೇವರು ಎಂದು ನಂಬಿದವರು, ಕೆಲಸಗಾರರನ್ನು ಕುಟುಂಬದವರಂತೆ ಕಂಡು ಗೌರವಿಸುವರು ಅವರಿಗೆ ಒಳ್ಳೆಯದಾಗಲಿ ಎಂದರು.

ಭಾಜಪ ಯುವ ಮುಂಖಡ ನರಹರಿ ಮಾತನಾಡಿ ಪ್ರತಿಭೆಯಿಂದ ಸಮಾಜಕ್ಕೆ ಎನಾದರೂ ಕೊಡುಗೆ ಕೊಟ್ಟರೆ ಅವರು ಮುಂದೆ ಬರುತ್ತಾರೆ ಎಲ್ಲ ಸಮೂದಾಯದೊಂದಿಗೆ ಉತ್ತಮ ಭಾಂದ್ಯವವನ್ನು ಹೊಂದಿದವರು, ಬೊಮ್ಮಯಿಯವರು ಸೂಚಿಸಿದ ಕಾರ್ಯಗಳನ್ನು ನೇತೃತ್ವ ವಹಿಸಿಕೊಂಡು ಮಾಡುವರು, ಕೋರೊನಾ ವಾರಿಯರ್ಸ ಆಗಿ ಸೇವೆ ಸಲ್ಲಿಸಿದವರು, ಉತ್ತಮ ಕಾರ್ಯ ಮಾಡಿದವರು ಬಣ್ಣಿಸಿದರು.

ಈ ಸಂದರ್ಭದಲ್ಲಿ ವಿವಿಧ ಮುಖಂಡರು ಹಾಗೂ ಹಂಚಿನಮನಿ ಕುಟುಂಬದವರು ಇದ್ದರು. ಮುಗಳಿಯ ಮಲ್ಲಿಕಾರ್ಜುನ ಜಾನಪದ ಕಲಾತಂಡದವರು ಜಾನಪದ ಗೀತೆಗಳನ್ನು ಹಾಡಿ ಗಮನ ಸೆಳೆದರು.

# ಕರ್ನಾಟಕ ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿಗೆ ಅರ್ಜಿ ಕರೆ

ಹಾವೇರಿ 21: ಕರ್ನಾಟಕ ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿಗೆ ಜಿಲ್ಲಾಡಳಿತದಿಂದ ಅರ್ಜಿ ಆಹ್ವಾನಿಸಲಾಗಿದೆ. ನವಂಬರ್ 1 ರಂದು ಜಿಲ್ಲಾಡಳಿತದಿಂದ ಆಯೋಜಿಸುವ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಜಿಲ್ಲೆಯ ಪ್ರತಿಭಾವಂತರಿಗೆ ಕರ್ನಾಟಕ ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿ ನೀಡಲು ಉದ್ದೇಶಿಸಲಾಗಿದೆ. ಸಾಹಿತ್ಯ, ಸಂಗೀತ, ರಂಗಭೂಮಿ, ಜಾನಪದ, ಕಲೆ, ನೃತ್ಯ, ಕ್ರೀಡೆ, ಪತ್ರಿಕೋದ್ಯಮ, ಕೃಷಿ, ವೈದ್ಯಕೀಯ, ಸಮಾಜ ಕ್ಷೇತ್ರ ಹಾಗೂ ಕನ್ನಡ ನಾಡು-ನುಡಿಗಾಗಿ ಗಣನೀಯ ಸೇವೆ ಸಲ್ಲಿಸುತ್ತಿರುವ ಸಂಘ-ಸಂಸ್ಥೆಗಳ ವಿಭಾಗದಲ್ಲಿ ಪ್ರಶಸ್ತಿ ನೀಡಲಾಗುವುದು. ಆಯ್ಕೆಗಾಗಿ ಜಿಲ್ಲಾ ಮಟ್ಟದ ಸಮಿತಿ ರಚಿಸಲಾಗಿದೆ. ಅರ್ಜಿ ಸಲ್ಲಿಸಿದವರ ಹೊರತಾಗಿಯೂ ಅತ್ಯುನ್ನತ ಸಾಧನೆಮಾಡಿದ ಪ್ರತಿಭೆಯುಳ್ಳವರನ್ನು ಪರಿಗಣಿಸಿ ಆಯ್ಕೆಮಾಡುವ ಅಧಿಕಾರವನ್ನು ಹೊಂದಲಾಗಿದೆ. ಆಯಾ ಕ್ಷೇತ್ರದಲ್ಲಿ ಸಾಧನೆಮಾಡಿದ ಮಾಹಿತಿ, ಅಗತ್ಯ ದಾಖಲಾತಿಗಳು, ಸಂಪರ್ಕ ಸಂಖ್ಯೆ, ವಿಳಾಸ ಒಳಗೊಂಡ ಸ್ವ ವಿವರಗಳ ಅರ್ಜಿಯೊಂದಿಗೆ ಸಾಧನೆಯ ಅಗತ್ಯ ಪ್ರಮಾಣಪತ್ರ, ದಾಖಲೆಗಳು, ಪತ್ರಿಕಾ ವರದಿ, ಫೋಟೋ ಸಹಿತ ಮಾಹಿತಿಯನ್ನು ದಿ. 27-10-2021 ರೊಳಗಾಗಿ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ ಭವನ, ದೇವಗಿರಿ-ಹಾವೇರಿ ಈ ಕಚೇರಿಗೆ ಸಲ್ಲಿಸಲು ಕೋರಲಾಗಿದೆ.

# ಮನುಕುಲಕ್ಕೆ ಬದುಕಿನ ಸಂದೇಶ ಸಾರಿದ 'ಮಹರ್ಷಿ ವಾಲ್ಮೀಕಿ'



**ಲೋಕದರ್ಶನ ವರದಿ**

ಶಿಗ್ಗಾವಿ 21: ಇಡೀ ಮನುಕುಲಕ್ಕೆ ಬದುಕಿನ ಸಂದೇಶವನ್ನು ಸಾರಿದ ಸರ್ವತೋಮುಖ ಚಿಂತಕ ಯಾರೆಂದರೆ 'ಮಹರ್ಷಿ ವಾಲ್ಮೀಕಿ' ಎಂದು ಮಂಡ್ಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯದ ವಿಸ್ತರಣಾಧಿಕಾರಿ ಶಿವರಾಜ ಹೇಳಿದರು.

ತಾಲೂಕಿನ ಗೊಟಗೋಡಿಯ ಉತ್ಸವ ರಾಕ್ ಗಾರ್ಡನ್‌ನ ರಾಜ್‌ಕುಮಾರ್ ಸರ್ಕಲ್‌ನಲ್ಲಿ ನಡೆದ ವಾಲ್ಮೀಕಿ ಜಯಂತಿ ಸಮಾರಂಭವನ್ನು ಬುಧವಾರ ಉದ್ಘಾಟಿಸಿ ಮಾತನಾಡಿ ನಾವು ಮಾಡಿದ ಪಾಪದ ಹೊರೆಯನ್ನು ಮಡದಿ, ಮಕ್ಕಳು ಹೊರಲಾರರು ಎಂಬ ಸತ್ಯವನ್ನು ಅರಿತು ದರೋಡೆ ಎಂಬ ಹೀನ ವೃತ್ತಿ ತ್ಯಜಿಸಿ 'ಶ್ರೀರಾಮ'ನ ಕೃಪಾಕಟಾಕ್ಷದಿಂದ ಮಹಿರ್ಷಿಯಾದ ವಾಲ್ಮೀಕಿ, ಸಮಾಜ ಸುಧಾರಕ, ದಾರ್ಶನಿಕ ಹಾಗೂ ಮಹಾತ್ಮನಾಗಿ ತನ್ನ ವಿಚಾರಗಳನ್ನು ಸಮಾಜಕ್ಕೆ ಧಾರೆ ಎರೆದಿದ್ದಾನೆ ಎಂದು ಶಿವರಾಜ ನುಡಿದರು.

ಶಿವರಾಜ ಗಾರ್ಡನ್ ವೀಕ್ಷಿಸಲು ಬಂದ ಮೊದಲ ಪ್ರವಾಸಿಗರಾಗಿ ಸಮಾರಂಭ ಉದ್ಘಾಟಿಸಿದರೆ, ಮಂಡ್ಯ ಕೃಷಿ ಉತ್ಪನ್ನ ಮಾರುಕಟ್ಟೆಯ ಅಧೀಕ್ಷಕ ಸರ್ವಜ್ಞ ಮತ್ತು ಅವರ ತಂಡದ ಸದಸ್ಯರು ಅತಿಥಿಗಳಾಗಿದ್ದರು. ಮದ್ದೂರಿನ ಶಿಕ್ಷಕ ಉದಯ ಹಾಗೂ ಪ್ರಸನ್ನ ಮಾತನಾಡಿ, ಭಕ್ತಿಯಿಂದ ಮುಕ್ತಿ ಮಾರ್ಗ ಸಂಪಾದಿಸಬಹುದು ಎಂದು ತೋರಿಸಿಕೊಟ್ಟ ಮಹಾನ್ ಕವಿ ವಾಲ್ಮೀಕಿ ಎಂದರು.


ಗಾರ್ಡನ್‌ನ ವ್ಯವಸ್ಥಾಪಕ ಬಸವರಾಜ ಮಡಿವಾಳರ, ಆನಂದ ಗೌಡ ಪಾಟೀಲ್, ಉತ್ಸವ ಶಾಲೆಯ ಮುಖ್ಯ ಶಿಕ್ಷಕ ಯು.ಎಂ.ಉಣಕಲ್, ಪರಶುರಾಮ ಕೊಂಡಾಯಿ ಮತ್ತಿತರರು ಭಾಗವಹಿಸಿದ್ದರು. ವಿದ್ಯಾ ಪಾಟೀಲ್ ಸ್ವಾಗತಿಸಿದರು, ಮುರಳೀಧರ ದೇಶಪಾಂಡೆ ವಂದಿಸಿದರು.

# ಆರ್‌ಟಿಇಎಸ್ ಕಾಲೇಜಿನಲ್ಲಿ 2ನೇ ಹಂತದ ಲಸಿಕಾ ವಿತರಣೆ



ರಾಣೇಬೆನ್ನೂರು 21: ನಗರ ಹೂರ ವಲಯದ ಆರ್.ಟಿ.ಇ.ಎಸ್ ಕಾಲೇಜು ವಿ.ಕೆ ಸಾವುಕಾರ ಸಭಾಭವನದಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಸಹಯೋಗದಲ್ಲಿ ದ್ವಿತೀಯ ಹಂತದ ಕೋವಿಡ್ ಲಸಿಕಾ ವಿತರಣಾ ಕಾರ್ಯಕ್ರಮವು ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಚಾರ್ಯ ಎಫ್.ಹೆಚ್. ಮಾಚೇನಹಳ್ಳಿ ಅವರು ಕೋವಿಡ್ ಲಸಿಕಾ ಕಾರ್ಯಕ್ರಮವು ಕಳೆದ 2 ವರ್ಷಗಳಿಂದ ನಿರಂತರವಾಗಿ ನಡೆಯುತ್ತ ಬಂದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ವೈರಸ್ ನಿವಾರಣೆಗಾಗಿ ಹಗಲಿರುಳು ಎನ್ನದೇ ನಿರಂತರವಾಗಿ ಪ್ರಯತ್ನ ಪಟ್ಟಿದ್ದರಿಂದ ಇಂದು ಮನುಷ್ಯ ರೋಗ ಮುಕ್ತರಾಗಿ ಬದುಕಲು ಸಾಧ್ಯವಾಗಿದೆ. 2ನೇ ಹಂತದ ಲಸಿಕೆ ಪಡೆಯುವ ಮುಕ್ತಾಯದ ಹಂತದಲ್ಲಿ ನಾವಿದ್ದೇವೆ ವಿದ್ಯಾರ್ಥಿಗಳು ನಿರ್ಲಕ್ಷ ಭಾವನೆ ತಾಳದೆ ಲಸಿಕೆ ಪಡೆದು ಆರೋಗ್ಯವಂತರಾಗಿ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಮುಂದಾಗಬೇಕು ಎಂದರು.

ರಾಷ್ಟ್ರೀಯ ಸೇವೆಯ ಯೋಜನಾಧಿಕಾರಿ ಡಾ.ಸರಸ್ವತಿ ಬಮ್ಮನಾಳ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಕಾಲೇಜಿನಲ್ಲಿ ಮೂದಲನೆ ಹಂತ ಯಶಸ್ವಿಯಾಗಿದೆ. ಎನ್ ಎಸ್ ಎಸ್ ವಿಧ್ಯಾರ್ಥಿಗಳು ಯೋಜನೆಯ ಉದ್ದೇಶವನ್ನು ಯಶಸ್ವಿಯಾಗಿ ನೆರವೆರಿಸಿ ರಾಷ್ಟ್ರೀಯ ಸೇವಾ ಕಾರ್ಯದಲ್ಲಿ ಪಾಲ್ಗೂಂಡು ತಮ್ಮ ಮಾನವೀಯತೆ ಮೇರೆದಿದ್ದಾರೆ ಅದಕ್ಕಾಗಿ ವಿಧ್ಯಾರ್ಥಿ ಸಮುದಾಯಕ್ಕೆ ಅಭಿನಂದಿಸುವುದಾಗಿ ಹೇಳಿದ ಅವರು 2 ನೇ ಹಂತದ ಕಾರ್ಯಕ್ರಮದಲ್ಲಿ ಎಲ್ಲರಿಗೂ ಪ್ರೇರಣೆ ನೀಡಿ ಯೋಜನೆ ಯಶಸ್ವಿಗೂಳಿಸಲು ಮುಂದಾಗಬೇಕು ಎಂದು ಕರೆ ನೀಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡಿದ್ದ ಪ್ರೊ. ಸಿ.ಎ ಹರಿಹರ ಅವರು ಸಮಾಜ ಮುಖಿ ಸೇವಾ ಕಾರ್ಯದಲ್ಲಿ ಎನ್ ಎಸ್ ಎಸ್ ಸೇವಾ ಯೋಜನೆಯ ಪಾತ್ರ ಕುರಿತಂತೆ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ಐ ಕ್ಯೂ ಎ.ಸಿ ಸಂಯೋಜಕ ಡಾ. ಮಧುಕುಮಾರ ಎಸ್, ತಾಲೂಕಾ ಆರೋಗ್ಯ ಅಧಿಕಾರಿಗಳು, ಸಿಬ್ಬಂದಿ, ಕಾಲೇಜು ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಶಿಗ್ಗಾವಿ: ಹಾನಗಲ್ಲ ಉಪ ಚುನಾವಣೆಯಲ್ಲಿ ಕಾಂಗ್ರೆಸ ಅಭ್ಯರ್ಥಿ ಶ್ರೀನಿವಾಸ ಮಾನೆ ಪರ ಗ್ರಾಮಸ್ಥರೊಂದಿಗೆ ಶಾಸಕ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಮತಯಾಚಿಸಿದರು. ಈ ಸಂದರ್ಭದಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯ ಸೋಮಣ್ಣ ಬೇವಿನಮರದ, ಗುರುನಗೌಡ ಪಾಟೀಲ, ಮಲ್ಲಿಕಾರ್ಜುನಗೌಡ ಪಾಟೀಲ, ಹನುಮರೆಡ್ಡಿ ನಡುವಿನಮನಿ, ಆರ್.ಜೆ.ಪಾಟೀಲ ಸೇರಿದಂತೆ ಗ್ರಾಮಸ್ಥರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

# ನ. 1ರಂದು ಜಿಲ್ಲಾಡಳಿತದಿಂದ ಅರ್ಥಪೂರ್ಣ ಕನ್ನಡ ರಾಜ್ಯೋತ್ಸವ



ಹಾವೇರಿ 21: ಕೋವಿಡ್ ಹಾಗೂ ಚುನಾವಣಾ ಮಾರ್ಗಸೂಚಿ ಅನುಸಾರ ಕರ್ನಾಟಕ ನಾಡು-ನುಡಿ ಪ್ರತಿಬಿಂಬಿಸುವ ಕರ್ನಾಟಕ ರಾಜ್ಯೋತ್ಸವ ದಿನಾಚರಣೆಯನ್ನು ಜಿಲ್ಲಾಡಳಿತದಿಂದ ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ವಿವಿಧ ಇಲಾಖಾ ಅಧಿಕಾರಿಗಳು ಕಾರ್ಯಕ್ರಮ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸಂಜಯ ಶೆಟ್ಟೆಣ್ಣವರ ಅವರು ಸೂಚನೆ ನೀಡಿದರು.

ಕರ್ನಾಟಕ ರಾಜ್ಯೋತ್ಸವ ಪೂರ್ವ ಸಿದ್ಧತೆ ಕುರಿತಂತೆ ಮಾತನಾಡಿದ ಅವರು, ನವೆಂಬರ್ 1 ರಂದು ಕೋವಿಡ್ ಮಾರ್ಗಸೂಚಿಯಂತೆ ಸೀಮಿತ ಸಂಖ್ಯೆಯಲ್ಲಿ ಹೊಸಮನಿ ಸಿದ್ದಪ್ಪ ಜಿಲ್ಲಾ ಕ್ರೀಡಾಂಗಣದಲ್ಲಿ ಕರ್ನಾಟಕ ರಾಜ್ಯೋತ್ಸವ ಸಮಾರಂಭ ನಡೆಸಲು ಸೂಚನೆ ನೀಡಿದರು.

ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಎಲ್ಲ ಸರ್ಕಾರಿ ಕಟ್ಟಡ, ವೃತ್ತಗಳಿಗೆ ದೀಪಾಲಂಕಾರಗೊಳಿಸಲು ಸೂಚನೆ ನೀಡಿದರು. ಕೋವಿಡ್ ಮಾರ್ಗಸೂಚಿಯಂತೆ 10 ವರ್ಷದೊಳಗಿನ ಮಕ್ಕಳು ಹಾಗೂ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಪ್ರವೇಶವಿರುವುದಿಲ್ಲ. ಇದನ್ನು ಪರಿಗಣಿಸಿ ಕಾರ್ಯಕ್ರಮ ಆಯೋಜಿಸಬೇಕು. ಸಾಮಾಜಿಕ ಅಂತರದ ಜೊತೆಗೆ ಸ್ಯಾನಿಟೈಸರ್ ಹಾಗೂ ಮಾಸ್ಕ್ ಧರಿಸುವುದುನ್ನು ಕಡ್ಡಾಯಗೊಳಿಸಬೇಕು. ಕ್ರೀಡಾಂಗಣದಲ್ಲಿ ಆರೋಗ್ಯ ಇಲಾಖೆಯಿಂದ ಹೆಲ್ಪ್‌ಡೆಸ್ಕ್ ಸ್ಥಾಪಿಸಬೇಕು ಎಂದು ಸೂಚನೆ ನೀಡಿದರು.

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕೋವಿಡ್ ವಾರಿಯರ್‌ಗಳಿಗೆ ಹಾಗೂ ನಾಡು-ನುಡಿಗಾಗಿ ಸೇವೆ ಸಲ್ಲಿಸಿದ ಪ್ರತಿಭಾವಂತರಿಗೆ ಸನ್ಮಾನಿಸಲು ಸೂಚನೆ ನೀಡಿದರು. ಸನ್ಮಾನ ಸಮಿತಿ, ಕಾರ್ಯಕ್ರಮ, ಆಮಂತ್ರಣ, ವೇದಿಕೆ ಅಲಂಕಾರ, ರಾಷ್ಟ್ರಧ್ವಜಾರೋಹಣ, ಪಥಸಂಚಲನ ಸೇರಿದಂತೆ ವ್ಯವಸ್ಥಿತವಾಗಿ ಕಾರ್ಯಕ್ರಮ ನಡೆಸಲು ವಿವಿಧ ಉಪ ಸಮಿತಿಯನ್ನು ರಚಿಸಲಾಯಿತು.

ರಾಜ್ಯ ಸರ್ಕಾರದ ನಿರ್ದೇಶನದಂತೆ ಅಕ್ಟೋಬರ್ 24 ರಿಂದ 30ರವರೆಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಹೆಸ್ಕಾಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಕನ್ನಡ ನಾಡು-ನುಡಿಗೆ ಸಂಬಂಧಿಸಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಸೂಚನೆ ನೀಡಿದರು.

ಅಕ್ಟೋಬರ್ 28ರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದಲ್ಲಿ ಕನ್ನಡ ಶ್ರೇಷ್ಠತೆಯನ್ನು ಸಾರುವ ಡಾ.ಕುವೆಂಪು ಅವರು ರಚಿತ "ಬಾರಿಸುವ ಕನ್ನಡ ಡಿಂ ಡಿಂ ಮವ", ಡಾ.ಕೆ.ಎಸ್. ನಿಸಾರ್ ಅಹ್ಮದ್ ಅವರು ರಚಿಸಿರುವ "ಜೋಗದ ಸಿರಿ ಬೆಳಕಿನಲ್ಲಿ" ಭಾವಗೀತೆ ಹಾಗೂ ಹಂಸಲೇಖ ಅವರು ರಚಿಸಿರುವ "ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು" ಗೀತೆಗಳ ಗಾಯನ ಕಾರ್ಯಕ್ರಮ ಹಾಗೂ ಶಾಲಾ- ಕಾಲೇಜು ಮಕ್ಕಳಿಗೆ ನಾಲ್ಕರಿಂದ ಐದು ನಿಮಿಷದ ಅವಧಿಯ ಕಾಲ ನಿರಂತರವಾಗಿ ಅನ್ಯಭಾಷೆ ಪದಗಳನ್ನು ಬಳಸದೇ ಕೇವಲ ಕನ್ನಡ ಪದಗಳನ್ನೇ ಬಳಸಿ ಮಾತನಾಡುವ ಸ್ಪರ್ಧೆಗಳನ್ನು ಆಯೋಜಿಸಿ ವಿಜೇತರಿಗೆ ಪ್ರಶಸ್ತಿ ಮತ್ತು ನಗದು ಬಹುಮಾನ ನೀಡಲು ಕ್ರಮವಹಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಿಗೆ ಸೂಚನೆ ನೀಡಲಾಯಿತು.

ಅಪರ ಜಿಲ್ಲಾಧಿಕಾರಿ ಡಾ.ಎನ್.ತಿಪ್ಪೇಸ್ವಾಮಿ ಅವರು ಕಾರ್ಯಕ್ರಮದ ಸ್ವರೂಪ ಕುರಿತಂತೆ ವಿವರಿಸಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಹಮ್ಮದ ರೋಷನ್, ಉಪವಿಭಾಗಾಧಿಕಾರಿ ಶಿವಾನಂದ ಉಳ್ಳಾಗಡ್ಡಿ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.